## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2018ರ ಮುಂಗಾರು ಹಂಗಾಮಿನಲ್ಲಿ ಬೆಳೆ ವಿಮೆ ಪ್ರಸ್ತಾವನೆಗಳನ್ನು ಬೆಳೆ ಸಮೀಕ್ಷೆಯಂತೆ ಬೆಳೆದ ಬೆಳೆಗಳೊಂದಿಗೆ ಹೋಲಿಸಿ ಪರಿಗಣಿಸುವ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: DPAR 73 EAG 2018. ದಿನಾಂಕ:27-08-2018.
2. ಬೆಳೆ ಸಮೀಕ್ಷೆ ಉಸ್ತುವಾರಿ ಸಮಿತಿ ಸಭೆಯ ನಡವಳಿ ದಿನಾಂಕ:26-10-2018.
3. D.O.No.ACS:DC:34:2019 Dated:04.02.2019.
4. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: F.No.13012/04/2017-Credit II ದಿನಾಂಕ:: 20th Feb 2019.
5. ದಿನಾಂಕ:13.02.2019ರಂದು ನಡೆದ ರಾಜ್ಯ ಮಟ್ಟದ ಬೆಳೆ ವಿಮಾ ಸಮನ್ವಯ ಸಮಿತಿ ಸಭೆಯ ನಡವಳಿ.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇ-ಆಡಳಿತ ರವರ ಅಧ್ಯಕ್ಷತೆಯಲ್ಲಿ ದಿ:27-03-2019 ರಂದು ನಡೆದ ಸಭೆಯ ನಡವಳಿ.
7. ಸರ್ಕಾರದ ಆದೇಶ ಸಂಖ್ಯೆ:Agri/AAE/7/2019 ಬೆಂಗಳೂರು, ದಿನಾಂಕ:28/06/2019.
8. ಆಯುಕ್ತರು, ಕೃಷಿ ಇಲಾಖೆ ರವರ ಪತ್ರ ಸಂಖ್ಯೆ: ಜ.ಕೃ.ನಿ(ಬೆ.ವಿ)/PMFBY/Kh-2018/45b/GO-Crop verf/2019-20, ದಿನಾಂಕ:31.10.2019.

*****

ಪ್ರಸ್ತಾವನೆ:

ನೈಸರ್ಗಿಕ ವಿಕೋಪಗಳು ಅಥವಾ ಕೀಟ ಮತ್ತು ರೋಗಗಳ ಪರಿಣಾಮವಾಗಿ ಯಾವುದೇ ಅಧಿಸೂಚಿಸಿದ ಬೆಳೆ ವಿಫಲವಾದಾಗ ರೈತರಿಗೆ ವಿಮಾ ರಕ್ಷಣೆಯನ್ನು ಮತ್ತು ಹಣಕಾಸಿನ ಬೆಂಬಲವನ್ನು ನೀಡುವುದು ಮತ್ತು ರೈತರ ಆದಾಯವನ್ನು ಸ್ಥಿರಗೊಳಿಸುವುದು ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಪ್ರಮುಖ ಉದ್ದೇಶವಾಗಿರುತ್ತದೆ. ಇದು ಭಾರತ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿ ಹಾಗೂ ಕಾಲಕಾಲಕ್ಕೆ ಹೊರಡಿಸಲಾಗುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಆದೇಶಗಳನ್ವಯ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಸಾಂಪ್ರದಾಯಿಕ ಅನುಷ್ಠಾನದಲ್ಲಿ ಆಗುವ ವಿಳಂಬ ಹಾಗೂ ಇತರೆ ನ್ಯೂನತೆಗಳನ್ನು ತಪ್ಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು 2016-17 ನೇ ಸಾಲಿನಲ್ಲಿ "ಸಂರಕ್ಷಣೆ" ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿರುತ್ತದೆ. ಬ್ಯಾಂಕುಗಳು, ವಿಮಾ ಕಂಪನಿಗಳು, ಸರ್ಕಾರಿ ಇಲಾಖೆಗಳು ಮತ್ತು ರೈತರು ಆನ್-ಲೈನ್ ಸೌಲಭ್ಯದ ಬಳಕೆದಾರರಾಗಿರುತ್ತಾರೆ. ಆನ್-ಲೈನ್ ಮುಖಾಂತರ ನೋಂದಣಿ ಪ್ರಕ್ರಿಯೆ ಆರಂಭಗೊಂಡು ವಿಮಾ ಪರಿಹಾರ ಲೆಕ್ಕಾಚಾರ ಹಂತದವರೆಗೂ ಎಲ್ಲಾ ಪ್ರಕ್ರಿಯೆಗಳನ್ನು ಸಂರಕ್ಷಣೆ ತಂತ್ರಾಂಶದ ಮೂಲಕ

ಮಾಡಲಾಗುತ್ತಿದೆ. ಸಂರಕ್ಷಣೆ ತಂತ್ರಾಂಶದಲ್ಲಿ ನೇರವಾಗಿ ಭೂಮಿ ದತ್ತಾಂಶವನ್ನು ನೋಂದಣಿ ಪ್ರಕ್ರಿಯೆಗೆ ಅಳವಡಿಸಿರುವುದರಿಂದ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿನ ದೋಷಗಳಾದ ದಾಖಲಾತಿ ದೋಷಗಳು, ನಕಲಿ ಭೂ ದಾಖಲೆಗಳು, ಒಂದೇ ಭೂಮಿಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಬೆಳೆ ವಿಮೆ ನೋಂದಣಿ, ವಿಸ್ತೀರ್ಣ ವ್ಯತ್ಯಾಸ ಅಂಶ ಇತ್ಯಾದಿಗಳನ್ನು ತಪ್ಪಿಸಿ, ನೈಜ ಮತ್ತು ಅರ್ಹ ರೈತರಿಗೆ ಪಾರದರ್ಶಕ ರೀತಿಯಲ್ಲಿ ವಿಮಾ ಪರಿಹಾರವನ್ನು ನೇರವಾಗಿ ರೈತರ ಬ್ಯಾಂಕ್ ಉಳಿತಾಯ ಖಾತೆಗೆ ಜಮೆ ಮಾಡುವ ಮೂಲಕ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೊಳಿಸಲಾಗುತ್ತಿದೆ.

ಭೂಮಿ ದತ್ತಾಂಶವನ್ನು ಬಳಸಿ ನೈಜ ರೈತರಿಗೆ ನೋಂದಣಿ ಮಾಡಿಸಲು ಅವಕಾಶ ಕಲ್ಪಿಸಲಾಗಿದ್ದಾಗ್ಯೂ ಸಹ, ಭೂಮಿ ತಂತ್ರಾಂಶದಲ್ಲಿ ಆಯಾ ಹಂಗಾಮುಗಳಲ್ಲಿ ಬೆಳೆ ಬಿತ್ತನೆ ಮಾಹಿತಿ ಲಭ್ಯವಿಲ್ಲದ ಕಾರಣ ಹಾಗೂ ಬೆಳೆ ವಿಮೆಯಡಿ ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಉದ್ದೇಶಿತ ಬಿತ್ತನೆ ಆಧಾರದ ಮೇರೆಗೆ ನೋಂದಣಿ ಮಾಡಲು ಅವಕಾಶವಿರುವುದರಿಂದ ಬೆಳೆಯನ್ನು ಬೆಳೆಯದೆ ಅಥವಾ ಬೇರೆ ಬೆಳೆ ಬೆಳೆದು ಇನ್ನೊಂದು ಬೆಳೆಗೆ ವಿಮೆ ಮಾಡಿಸುವ ಸಾಧ್ಯತೆಗಳು ಇರುತ್ತವೆ. ಕಳೆದ ಎರಡು ವರ್ಷಗಳ ಮುಂಗಾರು ಹಂಗಾಮುಗಳಲ್ಲಿ ಕೆಲವೊಂದು ವಿಮಾ ಘಟಕಗಳಲ್ಲಿ ವಿಮೆಗೆ ಒಳಪಟ್ಟ ಬೆಳೆ ವಿಸ್ತೀರ್ಣವು ನೈಜ ಬೆಳೆ ವಿಸ್ತೀರ್ಣಕ್ಕಿಂತ ಹೆಚ್ಚಾಗಿದ್ದು, ಇಂತಹ ಪ್ರಕರಣಗಳಲ್ಲಿ Area Correction Factor (ACF) ಅಳವಡಿಕೆಯೊಂದಿಗೆ ವಿಮಾ ಪರಿಹಾರವನ್ನು ಲೆಕ್ಕಾಚಾರ ಮಾಡಬೇಕಾಗಿದ್ದುದರಿಂದ ನೈಜ ಬೆಳೆಗಾರರಿಗೆ ವಿಮಾ ಪರಿಹಾರ ಮೊತ್ತ ಕಡಿಮೆಯಾಗಿರುತ್ತದೆ.

ಮೇಲೆ ಓದಲಾದ (1) ರ ಸರ್ಕಾರಿ ಆದೇಶದಂತೆ, ರಾಜ್ಯದಲ್ಲಿ 2018ರಲ್ಲಿ ರಾಜ್ಯ ಸರ್ಕಾರವು ಇ-ಆಡಳಿತ ಇಲಾಖೆಯು ಅಭಿವೃದ್ಧಿಪಡಿಸಿದ ಮೊಬೈಲ್ ಆ್ಯಪ್ ಮೂಲಕ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಡಳಿತ ನೇತೃತ್ವದಲ್ಲಿ ಪ್ರತಿಯೊಂದು ತಾಕಿನ ಬೆಳೆ ಸಮೀಕ್ಷೆಯನ್ನು ಕೈಗೊಂಡಿರುತ್ತದೆ. ಬೆಳೆ ವಿಮೆ ಸೇರಿದಂತೆ ಎಲ್ಲಾ ಉದ್ದೇಶಗಳಿಗಾಗಿ ಬೆಳೆ ಸಮೀಕ್ಷೆಯ ಮಾಹಿತಿಯನ್ನು ಬಳಸಬೇಕೆಂದು ತಿಳಿಸಲಾಗಿರುತ್ತದೆ.

ಮೇಲೆ ಓದಲಾದ (2) ರ ದಿನಾಂಕ: 26-10-2018 ರ ಬೆಳೆ ಸಮೀಕ್ಷೆ ಉಸ್ತುವಾರಿ ಸಮಿತಿ ನಡವಳಿಯಲ್ಲಿ ಬೆಳೆ ಸಮೀಕ್ಷೆ ಮಾಹಿತಿಯನ್ನು ಬೆಳೆ ವಿಮೆ ಯೋಜನೆಯಲ್ಲಿ ಬಳಸಲು ಹಾಗೂ ಅದರ ರೂಪರೇಷೆಗಳ ಬಗ್ಗೆ ಚರ್ಚಿಸಿ ನಿರ್ಧರಿಸಲಾಗಿದೆ.

ಮೇಲೆ ಓದಲಾದ (3) ರ ದಿ:04.02.2019 ರ ಪತ್ರದಲ್ಲಿ, ಬೆಳೆ ವಿಮೆ ಪ್ರಸ್ತಾವನೆಗಳನ್ನು ವಿಮಾ ಪರಿಹಾರಕ್ಕೆ ಪರಿಗಣಿಸುವ ಮುನ್ನ ಬೆಳೆ ಸಮೀಕ್ಷೆ ಮಾಹಿತಿಯನ್ನು ಮತ್ತು ಪ್ರಸ್ತಾವನೆಗಳನ್ನು ಹೋಲಿಸಿ, ಹೋಲಿಕೆಯಾದ ಪ್ರಸ್ತಾವನೆಗಳನ್ನು ಪರಿಗಣಿಸಲು ಮತ್ತು ಬೆಳೆ ಹೊಂದಾಣಿಕೆಯಾಗದಿರುವ ಪ್ರಸ್ತಾವನೆಗಳನ್ನು ಕೆಲವೊಂದು ವಿನಾಯಿತಿಗಳನ್ನು ನೀಡಿದ ನಂತರ ತಿರಸ್ಕರಿಸಿ ರೈತರ ವಿಮಾ ಕಂತಿನ ಮೊತ್ತವನ್ನು ಹಿಂದಿರುಗಿಸಲು ಅನುಮತಿ ನೀಡುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಮೇಲೆ ಓದಲಾದ (4) ರ ಪತ್ರದಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಪ್ರಸ್ತಾವನೆಯನ್ನು ಒಪ್ಪಿ ಅನುಮೋದನೆ ನೀಡಿರುತ್ತದೆ.

ಮೇಲೆ ಓದಲಾದ (5) ರಲ್ಲಿನ ದಿನಾಂಕ:13-02-2019 ರಂದು ನಡೆದ ರಾಜ್ಯ ಮಟ್ಟದ ಬೆಳೆ ವಿಮೆ ಸಮನ್ವಯ ಸಮಿತಿಯ ಸಭೆಯಲ್ಲಿಯೂ ಸಹ ಚರ್ಚಿಸಿ ಬೆಳೆ ಸಮೀಕ್ಷೆ ಮಾಹಿತಿಯನ್ನು ಬೆಳೆ ವಿಮೆ ಯೋಜನೆಯಡಿ ಬಳಸುವಂತೆ ನಿರ್ಧರಿಸಲಾಗಿರುತ್ತದೆ.

ಮೇಲೆ ಓದಲಾದ (6) ರಲ್ಲಿನ ದಿನಾಂಕ 27.03.2019 ರಂದು ಸಂಬಂಧಪಟ್ಟ ಎಲ್ಲಾ ಬೆಳೆ ವಿಮಾ ಸಂಸ್ಥೆಗಳೊಂದಿಗೆ ನಡೆದ ಸಭೆಯಲ್ಲಿ ಬೆಳೆ ಸಮೀಕ್ಷೆ ಮಾಹಿತಿಯನ್ನು ಬೆಳೆ ವಿಮೆ ಯೋಜನೆಯಡಿ ಬಳಸುವುದರ ಜೊತೆಗೆ ನೀಡಬಹುದಾದ ವಿವಿಧ ವಿನಾಯಿತಿಗಳ ಕುರಿತು ಹಾಗೂ ಬೆಳೆ ಸಮೀಕ್ಷೆ ಮಾಹಿತಿಯೊಂದಿಗೆ ಬೆಳೆ ವಿಮೆ ಯೋಜನೆಯ ಪ್ರಸ್ತಾವನೆಯಲ್ಲಿರುವಂತಹ ಬೆಳೆಯು ತಾಳೆಯಾಗದೆ ಇದ್ದಂತಹ ಪಕ್ಷದಲ್ಲಿ ತೆಗೆದುಕೊಳ್ಳಬೇಕಾದ ಮುಂದಿನ ಕ್ರಮಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿರುತ್ತದೆ.

ಮೇಲೆ ಓದಲಾದ (7) ರಲ್ಲಿನ ಸರ್ಕಾರದ ಆದೇಶದಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿಯಲ್ಲಿನ ನ್ಯೂನತೆಗಳನ್ನು ಸರಿಪಡಿಸಲು ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಕುಂದುಕೊರತೆ ನಿವಾರಣಾ ಸಮಿತಿಗಳನ್ನು (State Level Grievance Redressal Committee & District Level Grievance Redressal Committee) ರಚಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (8) ರ ಕೃಷಿ ಆಯುಕ್ತರ ಪ್ರಸ್ತಾವನೆಯಲ್ಲಿ ಸಂರಕ್ಷಣೆ ತಂತ್ರಾಂಶದಲ್ಲಿ ಪ್ರತಿಯೊಂದು ಬೆಳೆ ವಿಮೆ ಪ್ರಸ್ತಾವನೆಯನ್ನು ಬೆಳೆ ಸಮೀಕ್ಷೆ ಮಾಹಿತಿಯೊಂದಿಗೆ ಹೋಲಿಸುವ ವಿಧಾನ, ಅಳವಡಿಸಬೇಕಾದ ತತ್ವಗಳು, ಬೆಳೆ ಹೊಂದಾಣಿಕೆಯಾಗದೆ ಇರುವಂತಹ ಸನ್ನಿವೇಶಗಳಲ್ಲಿ ನೀಡಬಹುದಾದ ವಿನಾಯಿತಿಗಳು ಹಾಗೂ ವಿನಾಯತಿ ನೀಡಿದ ನಂತರ ಅಸಿಂಧುವಾಗುವಂತಹ ಪ್ರಸ್ತಾವನೆಗಳನ್ನು ಪರಿಶೀಲಿಸುವ ವಿಧಾನಗಳು ಹಾಗೂ ರೈತರಿಂದ ಬರುವ ಆಕ್ಷೇಪಣೆಗಳು ಹಾಗೂ ಕುಂದುಕೊರತೆಗಳ ನಿವಾರಣೆ ಮಾಡುವ ರೀತಿ ನೀತಿಗಳ ಕುರಿತು ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 77 ಕೃಕೈಉ 2019, ಬೆಂಗಳೂರು, ದಿನಾಂಕ:08.11.2019**

ರಾಜ್ಯ ಸರ್ಕಾರವು ಮುಂಗಾರು 2018 ರ ಹಂಗಾಮಿಗೆ ಸಂಬಂಧಿಸಿದಂತೆ ನಡೆಸಲಾದ ಬೆಳೆ ಸಮೀಕ್ಷೆ ಮಾಹಿತಿಯನ್ನು ಮುಂಗಾರು 2018 ರ ಹಂಗಾಮಿನಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಮತ್ತು ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ ನೋಂದಣಿಯಾದ ಬೆಳೆ ವಿಮೆ ಪ್ರಸ್ತಾವನೆಗಳಿಗೆ ಬೆಳೆ ಹೊಂದಾಣಿಕೆ ಮಾಡಲು ಸರ್ಕಾರವು ಈ ಮೂಲಕ ಅನುಮತಿಯನ್ನು ನೀಡಿದೆ.

ಈ ಕುರಿತು ಕೆಳಕಂಡಂತೆ ತತ್ವಗಳನ್ನು ಮತ್ತು ವಿಧಾನಗಳನ್ನು ಪಾಲಿಸತಕ್ಕದ್ದು.

1. ಸಂರಕ್ಷಣೆ ತಂತ್ರಾಂಶದ ಮೂಲಕ ನೋಂದಣಿಯಾದ ಹಾಗೂ ಬೆಳೆ ವಿಮಾ ಸಂಸ್ಥೆಗಳು ಸ್ವೀಕರಿಸಿದ ಪ್ರತಿಯೊಂದು ಪ್ರಸ್ತಾವನೆ (ಬೆಳೆ ಸಾಲ ಪಡೆದ ಮತ್ತು ಬೆಳೆ ಸಾಲ ಪಡೆಯದ) ಯಲ್ಲಿನ ಬೆಳೆ ವಿಮೆಗೆ ನೋಂದಾಯಿಸಿದ ಬೆಳೆಗಳನ್ನು ಸಂಬಂಧಪಟ್ಟ ತಾಕಿನಲ್ಲಿ ಬೆಳೆ ಸಮೀಕ್ಷೆ ಪ್ರಕಾರ ಬೆಳೆದ ಬೆಳೆಯನ್ನು ವಿದ್ಯುನ್ಮಾನ ರೂಪದಲ್ಲಿ ಹೋಲಿಸುವುದು. ಬೆಳೆಯ ವಿಸ್ತೀರ್ಣವನ್ನು ಪರಿಗಣಿಸದೆ ಬೆಳೆಯ ಹೆಸರನ್ನು ಮಾತ್ರ ಹೊಂದಾಣಿಕೆ ಮಾಡುವುದು.
2. ಬೆಳೆ ಸಮೀಕ್ಷೆ ಕೈಗೊಂಡ ಸಂದರ್ಭದಲ್ಲಿ ಒಂದು ತಾಕಿನಲ್ಲಿ ಒಂದಕ್ಕಿಂತ ಹೆಚ್ಚು ಬೆಳೆಗಳು ಕಂಡು ಬಂದಲ್ಲಿ ಯಾವುದಾದರೂ ಒಂದು ಬೆಳೆಯು, ವಿಮೆಗೆ ನೊಂದಾಯಿಸಿದ ಬೆಳೆಯೊಂದಿಗೆ ಹೊಂದಾಣಿಕೆಯಾದಲ್ಲಿ ಅಂತಹ ಪ್ರಸ್ತಾವನೆಯನ್ನು ಸಂಪೂರ್ಣವಾಗಿ ಸಿಂಧುವೆಂದು ಪರಿಗಣಿಸತಕ್ಕದ್ದು.

3. ಬೆಳೆ ವಿಮೆ ಪ್ರಸ್ತಾವನೆಗಳಲ್ಲಿ ಒಂದಕ್ಕಿಂತ ಹೆಚ್ಚಿನ ಸರ್ವೆ ನಂಬರ್ ಗಳಿರುವ ಸಾಧ್ಯತೆಗಳಿದ್ದು. ಕನಿಷ್ಠ ಯಾವುದಾದರೂ ಒಂದು ಸರ್ವೆ ನಂಬರ್ ನಲ್ಲಿ ನೋಂದಾಯಿತ ಬೆಳೆಯು ಬೆಳೆ ಸಮೀಕ್ಷೆ ಸಮಯದಲ್ಲಿ ಕಂಡು ಬಂದ ಬೆಳೆಯೊಂದಿಗೆ ಹೊಂದಾಣಿಕೆಯಾದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಸಂಪೂರ್ಣವಾಗಿ ಸಿಂಧುವೆಂದು ಪರಿಗಣಿಸತಕ್ಕದ್ದು.

4. ಬೆಳೆ ಸಮೀಕ್ಷೆ ಮಾಹಿತಿಯೊಂದಿಗೆ ಹೊಂದಾಣಿಕೆಯಾಗದೆ ಇದ್ದ ಪಕ್ಷದಲ್ಲಿ ಅನುಬಂಧ-1 ರಲ್ಲಿ ನೀಡಿರುವ ವಿನಾಯಿತಿಗಳನ್ನು ಪರಿಗಣಿಸುವುದು. ಈ ರೀತಿ ವಿನಾಯಿತಿ ನೀಡುವ ಸಂದರ್ಭದಲ್ಲೂ ಕನಿಷ್ಠ ಯಾವುದಾದರೂ ಒಂದು ಸರ್ವೇ ನಂಬರ್ ನಲ್ಲಿ ಕನಿಷ್ಠ ಯಾವುದಾದರೂ ಒಂದು ವಿನಾಯಿತಿ ದೊರಕಿದ್ದರೂ ಕ್ರಮ ಸಂಖ್ಯೆ (2) ಮತ್ತು (3) ರಲ್ಲಿ ತಿಳಿಸಿರುವಂತೆ ಪ್ರಸ್ತಾವನೆಯನ್ನು ಸಂಪೂರ್ಣವಾಗಿ ಸಿಂಧುವೆಂದು ಪರಿಗಣಿಸತಕ್ಕದ್ದು. ಕೃಷಿಯೇತರ ಜಮೀನುಗಳಿಗೆ ಈ ವಿನಾಯಿತಿಗಳನ್ನು ಪರಿಗಣಿಸತಕ್ಕದ್ದಲ್ಲ.

5. ಬೆಳೆ ಸಮೀಕ್ಷೆ ಮಾಹಿತಿಯೊಂದಿಗೆ ಹೊಂದಾಣಿಕೆ ಮಾಡಿದ ನಂತರ, ವಿಮೆ ಮಾಡಿಸಿದ ಬೆಳೆ ಬೆಳೆದಿರುವುದಾಗಿ ಕಂಡು ಬಂದಂತಹ ಅಥವಾ ಯಾವುದಾದರೂ ವಿನಾಯಿತಿ ದೊರಕಿರುವಂತಹ ಪ್ರಸ್ತಾವನೆಗಳನ್ನು ಮಾತ್ರ ಸಿಂಧುವೆಂದು ಪರಿಗಣಿಸಿ ಬೆಳೆ ವಿಮೆ ಪರಿಹಾರಕ್ಕಾಗಿ ಪರಿಗಣಿಸತಕ್ಕದ್ದು. ಉಳಿದಂತಹ ಪ್ರಸ್ತಾವನೆಗಳನ್ನು ಪರಿಶೀಲನೆ ಅಗತ್ಯವಿದೆ ಎಂದು ವಿಂಗಡಿಸಿ ಪರಿಶೀಲನೆಗೆ ಒಳಪಡಿಸತಕ್ಕದ್ದು.

6. ಪರಿಶೀಲನೆಗೆ ಅಗತ್ಯವಿರುವ ಎಲ್ಲಾ ಪ್ರಸ್ತಾವನೆಗಳನ್ನು ಸಂರಕ್ಷಣೆ ತಂತ್ರಾಂಶದಲ್ಲಿ ಸಂಬಂಧಪಟ್ಟ ಬೆಳೆ ವಿಮಾ ಸಂಸ್ಥೆಗಳ ಲಾಗಿನ್ ನಲ್ಲಿ ಪ್ರದರ್ಶಿಸುವುದು.

7. ಸಂಬಂಧಪಟ್ಟ ವಿಮಾ ಸಂಸ್ಥೆಗಳು ಈ ಎಲ್ಲಾ ಪ್ರಸ್ತಾವನೆಗಳನ್ನು ಪರಿಶೀಲನಾ ಅಧಿಕಾರಿಗಳಿಗೆ ಸಂರಕ್ಷಣೆ ತಂತ್ರಾಂಶದ ಮೂಲಕ ಕಳುಹಿಸುವುದು. ಪರಿಶೀಲನಾ ಅಧಿಕಾರಿಗಳು ಈ ಮುಂದಿನಂತೆ ಇರತಕ್ಕದ್ದು.

   7.1 ಸಾಲ ಪಡೆದ ರೈತರಿಗೆ ಬೆಳೆ ವಿಮೆ ಪ್ರಸ್ತಾವನೆಯನ್ನು ನೋಂದಣಿ ಮಾಡಿದ ಬ್ಯಾಂಕ್ ಶಾಖೆಯ ವ್ಯವಸ್ಥಾಪಕರು ಪರಿಶೀಲನಾ ಅಧಿಕಾರಿಗಳಾಗಿರುತ್ತಾರೆ.

   7.2 ಸಾಲ ಪಡೆಯದ ರೈತರಿಗೆ ತಾಲ್ಲೂಕು ಮಟ್ಟದಲ್ಲಿ ಕೃಷಿ ಬೆಳೆಗಳು ಮತ್ತು ತೋಟಗಾರಿಕೆ ಬೆಳೆಗಳಿಗೆ ಕ್ರಮವಾಗಿ ತಾಲ್ಲೂಕು ಮಟ್ಟದ ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಪರಿಶೀಲನಾ ಅಧಿಕಾರಿಗಳಾಗಿರುತ್ತಾರೆ. ಕ್ಷೇತ್ರ ಭೇಟಿ ಅಗತ್ಯವಿರುವಂತಹ ಕಡೆ ಹೋಬಳಿ ಮಟ್ಟದ ಅಧಿಕಾರಿಗಳ ಮೂಲಕ ಬೆಳೆ ಪರಿಶೀಲನೆ ಮಾಡಿಸುವುದು.

8. ಪರಿಶೀಲನಾ ಅಧಿಕಾರಿಗಳು ಸಂರಕ್ಷಣೆ ತಂತ್ರಾಂಶದ ಮೂಲಕ ಪ್ರತಿಯೊಂದು ಪ್ರಸ್ತಾವನೆಗಳನ್ನು ಪರಿಶೀಲಿಸುವುದು. ಬೆಳೆ ವಿಮೆ ಪ್ರಸ್ತಾವನೆಯಲ್ಲಿನ ವಿವರ ಹಾಗೂ ಅದಕ್ಕೆ ಸಂಬಂಧಿಸಿದ ತಾಕುಗಳ ಬೆಳೆ ಸಮೀಕ್ಷೆಯ ವಿವರಗಳನ್ನು ಹೋಲಿಸುವುದು. ಪ್ರಸ್ತಾವನೆಗಳನ್ನು ಪರಿಶೀಲಿಸಿ ಈ ಮುಂದಿನಂತೆ ಕ್ರಮವಹಿಸುವುದು.

   8.1 ಬೆಳೆ ಸಮೀಕ್ಷೆ ಸಮಯದಲ್ಲಿ ಸೆರೆಹಿಡಿಯಲಾದ ಛಾಯಾಚಿತ್ರದಲ್ಲಿ ಬೆಳೆ ವಿಮೆ ಮಾಡಿಸಿದ ಬೆಳೆಯು ಕಂಡುಬಂದಲ್ಲಿ ಅಂತಹ ಪ್ರಸ್ತಾವನೆಗಳನ್ನು ಸರಿಯಾಗಿವೆ ಎಂದು ವಿಮಾ ಕಂಪನಿಗಳಿಗೆ ಪರಿಗಣಿಸಲು ಗುರುತಿಸುವುದು, ವಿಮಾ ಸಂಸ್ಥೆಗಳು ಅಂತಹ ಪ್ರಸ್ತಾವನೆಗಳನ್ನು ಪರಿಶೀಲಿಸಿ ಪರಿಹಾರ ಮೊತ್ತವನ್ನು ನೀಡಲು ಪರಿಗಣಿಸತಕ್ಕದ್ದು.

8.2 ಛಾಯಾಚಿತ್ರದಲ್ಲಿ ಬೆಳೆ ವಿಮೆ ಮಾಡಿಸಿದ ಬೆಳೆಯು ಕಂಡುಬಾರದೇ ಇದ್ದಲ್ಲಿ. ವಿಮೆ ಮಾಡಿಸಿದ ಬೆಳೆಯು ಬಹುವಾರ್ಷಿಕ ಬೆಳೆಯಾಗಿದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ಮುಂದಿನ ಪರಿಶೀಲನೆಗೆ ಗುರುತಿಸಿ. ಸ್ಥಳ ತನಿಖೆ ಮಾಡಿ, GPS ಛಾಯಾ ಚಿತ್ರದೊಂದಿಗೆ ಮಾಹಿತಿ ಸಂಗ್ರಹಿಸಿ. ಒಂದು ವೇಳೆ ವಿಮೆ ಮಾಡಿಸಿದ ಬೆಳೆಯು ಕ್ಷೇತ್ರದಲ್ಲಿ ಕಂಡುಬಂದಲ್ಲಿ ಅದನ್ನು ಸಿಂಧುವೆಂದು ತಿಳಿಸಿ. ವಿಮಾ ಸಂಸ್ಥೆಗಳಿಗೆ ಪರಿಗಣಿಸಲು ಗುರುತಿಸುವುದು. ವಿಮಾ ಸಂಸ್ಥೆಗಳು ಅಂತಹ ಪ್ರಸ್ತಾವನೆಗಳನ್ನು ಪರಿಶೀಲಿಸಿ ವಿಮೆ ಪರಿಹಾರ ಮೊತ್ತವನ್ನು ನೀಡಲು ಪರಿಗಣಿಸತಕ್ಕದ್ದು.

8.3 ವಿಮೆ ಮಾಡಿಸಿದ ಬೆಳೆಯು ಋತುಮಾನಿಕ ಬೆಳೆಯಾಗಿದ್ದಲ್ಲಿ ಮತ್ತು ಬೆಳೆ ಸಮೀಕ್ಷೆ ಮಾಹಿತಿ ಪ್ರಕಾರ ಕೃಷಿಯೇತರ ಉದ್ದೇಶಕ್ಕಾಗಿ ಬಳಕೆಯೆಂದು ನಮೂದಿಸಿದ್ದಲ್ಲಿ ಹಾಗೂ ಛಾಯಾಚಿತ್ರದಲ್ಲಿ ವಿಮಾ ಮಾಡಿಸಿದ ಬೆಳೆಯು ಕಂಡು ಬಾರದೇ ಇದ್ದಲ್ಲಿ, ಆದರೆ, ಸದರಿ ತಾಕಿನ ಜಮೀನು ಕೃಷಿ ಬಳಕೆಗೆ ಯೋಗ್ಯವೆಂದು ಕಂಡುಬಂದಲ್ಲಿ ಅಂತಹ ಪ್ರಸ್ತಾವನೆಗಳನ್ನು ಸಹ ಅನುಬಂಧ-1 ರಲ್ಲಿ ನೀಡಲಾಗಿರುವ ವಿನಾಯಿತಿಗಳನ್ನು ನೀಡಲು ಪರಿಗಣಿಸುವುದು. ಒಂದು ವೇಳೆ ವಿನಾಯಿತಿ ದೊರಕಿದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ಬೆಳೆವಿಮೆ ಸಂಸ್ಥೆಗೆ ಪರಿಗಣಿಸಲು ಗುರುತಿಸುವುದು, ತಪ್ಪಿದ್ದಲ್ಲಿ ಅಸಿಂಧು ಎಂದು ಪರಿಗಣಿಸಿ ಪ್ರಸ್ತಾವನೆಯನ್ನು ತಿರಸ್ಕರಿಸಲು ಶಿಫಾರಸ್ಸು ಮಾಡುವುದು.

8.4 ಒಂದು ವೇಳೆ ವಿಮೆ ಮಾಡಿಸಿದ ಬೆಳೆಯು ಋತುಮಾನಿಕ ಬೆಳೆಯಾಗಿದ್ದು, ಛಾಯಾಚಿತ್ರದಲ್ಲಿ ಬೆಳೆ ಕಂಡು ಬಾರದೇ ಇದ್ದಲ್ಲಿ ಹಾಗೂ ಯಾವುದೇ ವಿನಾಯಿತಿ ದೊರಕದೇ ಇದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ಅಸಿಂಧು ವೆಂದು ಪರಿಗಣಿಸಿ ತಿರಸ್ಕರಿಸಲು ಶಿಫಾರಸ್ಸು ಮಾಡುವುದು.

8.5 ತಿರಸ್ಕರಣೆಗೆ ಗುರುತಿಸಲಾದ ಪ್ರಸ್ತಾವನೆಗಳ ಕುರಿತು ನೊಂದಣಿದಾರರಿಗೆ (ನೊಂದಾಯಿತ ರೈತರು) ಸೂಚನಾ ಫಲಕದ ಮೂಲಕ /ಎಸ್‌ಎಂಎಸ್ ಮೂಲಕ ತಿಳಿಸುವುದು. ತಮ್ಮ ವಿಮಾ ಪ್ರಸ್ತಾವನೆಯನ್ನು ತಿರಸ್ಕರಿಸುವ ನಿರ್ಧಾರವನ್ನು ಪ್ರಸ್ತಾಪಿಸಿ ತಾವು ನೋಂದಣಿ ಮಾಡಿಸಿದ ಬೆಳೆ ಬೆಳೆದಿರುವ ಸಂಬಂಧ ಪುರಾವೆಗಳ ಸಮೇತವಾಗಿ ದೂರನ್ನು ಅವರಿಗೆ ತಿಳಿಸಿದ ದಿನಾಂಕದಿಂದ (ಸೂಚನಾ ಫಲಕದಲ್ಲಿ ಪ್ರದರ್ಶಿಸಿದ ದಿನಾಂಕ) 15 ದಿವಸದೊಳಗಾಗಿ ಸಲ್ಲಿಸಬಹುದು. ಅಂತಹ ಪ್ರಕರಣಗಳ ನೈಜತೆಯನ್ನು ಪರಿಶೀಲಿಸಿ ಅರ್ಜಿಗಳನ್ನು ಸೂಕ್ತ ರೀತಿಯಲ್ಲಿ ವಿಲೇ ಮಾಡುವ ಉದ್ದೇಶಕ್ಕಾಗಿ ಈ ಮುಂದಿನಂತೆ ದೂರು ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

1. ಉಪ ವಿಭಾಗಾಧಿಕಾರಿಗಳು, ಕಂದಾಯ ಇಲಾಖೆ – ಅಧ್ಯಕ್ಷರು
2. ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕರು – ಸದಸ್ಯರು
3. ಸಂಬಂಧಿತ ಬೆಳೆವಿಮೆ ಕಂಪನಿಯ ಪ್ರತಿನಿಧಿಗಳು (ಓವರ್) – ಸದಸ್ಯರು
4. ಸಹಾಯಕ ಕೃಷಿ ನಿರ್ದೇಶಕರು (ಸಂಬಂಧಿತ ತಾಲ್ಲೂಕು) – ಸದಸ್ಯರು ಹಾಗೂ ಕೃಷಿ ಬೆಳೆಗಳ ಪ್ರಸ್ತಾವನೆಗಳಿಗೆ ಸದಸ್ಯ ಕಾರ್ಯದರ್ಶಿಗಳು
5. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಸಂಬಂಧಿತ ತಾಲ್ಲೂಕು) –ಸದಸ್ಯರು ಹಾಗೂ ತೋಟಗಾರಿಕಾ ಬೆಳೆಗಳ ಪ್ರಸ್ತಾವನೆಗಳಿಗೆ ಸದಸ್ಯ ಕಾರ್ಯದರ್ಶಿಗಳು

8.6 ಸದರಿ ಸಮಿತಿಯು ಸ್ವೀಕೃತವಾದ ದೂರುಗಳನ್ನು ಪರಿಶೀಲಿಸಿ ಪ್ರಕರಣಗಳ ಅರ್ಹತೆಗೆ ಅನುಗುಣವಾಗಿ ತೀರ್ಮಾನಿಸುವುದು. ಒಂದು ವೇಳೆ ಸಮಿತಿಯು ಯಾವುದೇ ವಿಮಾ ಪ್ರಸ್ತಾವನೆ ಸಿಂಧುವೆಂದು ನಿರ್ಧರಿಸಿದಲ್ಲಿ ಅಂತಹ ಪ್ರಕರಣಗಳನ್ನು ಸಂಬಂಧಪಟ್ಟ ವಿಮಾ ಸಂಸ್ಥೆಗಳು ವಿಮಾ ಪರಿಹಾರ ನೀಡಲು ಪರಿಗಣಿಸತಕ್ಕದ್ದು.

8.7 ಸದರಿ ಸಮಿತಿಯ ನಿರ್ಣಯವನ್ನು ರೈತರು, ಬ್ಯಾಂಕ್ ಅಥವಾ ವಿಮಾ ಸಂಸ್ಥೆಗಳು ಸಮಿತಿಯು ನಿರ್ಣಯಿಸಿದ ದಿನಾಂಕದಿಂದ 15 ದಿವಸಗಳ ಒಳಗಾಗಿ ಜಿಲ್ಲಾ ಮಟ್ಟದ ಕುಂದು ಕೊರತೆ ನಿವಾರಣಾ ಸಮಿತಿಗೆ (District Level Grievance Redressal Committee) ಮೇಲ್ಮನವಿ ಸಲ್ಲಿಸಬಹುದು. ಸದರಿ ಸಮಿತಿಯು ಈ ಮುಂದಿನಂತಿದೆ.

1. ಜಿಲ್ಲಾಧಿಕಾರಿಗಳು –ಅಧ್ಯಕ್ಷರು
2. ಜಂಟಿ ನಿರ್ದೇಶಕರು, ಕೃಷಿ ಇಲಾಖೆ –ಸದಸ್ಯ ಕಾರ್ಯದರ್ಶಿಗಳು
3. ರೈತ ಪ್ರತಿನಿಧಿಗಳು –ಸದಸ್ಯರು
4. ಲೀಡ್ ಬ್ಯಾಂಕ್ ಮ್ಯಾನೇಜರ್ –ಸದಸ್ಯರು
5. ಜಿಲ್ಲಾ ಸಾಂಖ್ಯಿಕ ಅಧಿಕಾರಿ –ಸದಸ್ಯರು
6. ತೋಟಗಾರಿಕೆ ಉಪ ನಿರ್ದೇಶಕರು –ಸದಸ್ಯರು
7. ಬೆಳೆ ವಿಮೆ ಕಂಪನಿಯ ಪ್ರತಿನಿಧಿಗಳು –ಸದಸ್ಯರು

8.8 ಮೇಲ್ಮನವಿಯ ಸಮಯದಲ್ಲಿ ಸಮಿತಿಯು ಪ್ರಸ್ತಾವನೆಯನ್ನು ಮಾನ್ಯವೆಂದು ಪರಿಗಣಿಸಿದರೆ ಅಂತಹ ಪ್ರಸ್ತಾವನೆಯನ್ನು ಒಪ್ಪಿಕೊಳ್ಳುವುದು. ಇಲ್ಲದಿದ್ದರೆ ತಿರಸ್ಕರಿಸುವುದು. ಬೆಳೆ ವಿಮೆ ಪರಿಹಾರ ಮೊತ್ತವನ್ನು ಇದಕ್ಕೆ ಅನುಗುಣವಾಗಿ ಇತ್ಯರ್ಥಪಡಿಸುವುದು.

8.9 ಮೇಲ್ಮನವಿ ಸಮಿತಿಯ ನಿರ್ಧಾರವು ಅಂತಿಮವಾಗಿದ್ದು ಎಲ್ಲಾ ಸಂಬಂಧಿತ ಪಾಲುದಾರರು/ ಮಧ್ಯಸ್ಥಗಾರರು ಇದಕ್ಕೆ ಬದ್ಧರಾಗಿರತಕ್ಕದ್ದು.

9. ಮುಂಗಾರು 2018 ರಲ್ಲಿ ಪ್ರತಿ ಪ್ರಸ್ತಾವನೆಯನ್ನು ಬೆಳೆ ಸಮೀಕ್ಷೆ ಮಾಹಿತಿಯೊಂದಿಗೆ ಹೋಲಿಕೆ ಮಾಡಲಾಗುತ್ತಿರುವುದರಿಂದ Area Correction Factor (ACF) ಪರಿಗಣಿಸತಕ್ಕದ್ದಲ್ಲ.

10. ಈ ಎಲ್ಲಾ ಪ್ರಕ್ರಿಯೆಗಳ ನಂತರ ಬೆಳೆ ಸಾಲ ಪಡೆದ ರೈತರ ವಿಮಾ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ವಿಮಾ ಮಾಡಿಸಿದ ಬೆಳೆಯ ಬದಲಾಗಿ ಬೆಳೆ ಸಮೀಕ್ಷೆ ಮಾಹಿತಿ ಪ್ರಕಾರ ಬೇರೊಂದು ಬೆಳೆಯನ್ನು ಬೆಳೆದಿರುವುದು ಕಂಡು ಬಂದಲ್ಲಿ ಹಾಗೂ ಅಂತಹ ಬೆಳೆಯೂ ಸಹ ಅದೇ ವಿಮಾ ಘಟಕದಡಿ, ಅದೇ ವಿಮಾ ಯೋಜನೆಯಡಿ ಅಧಿಸೂಚಿತ ಬೆಳೆಯಾಗಿದ್ದಲ್ಲಿ, ಮೇಲೆ ಓದಲಾದ (4)ರ ಕೇಂದ್ರ ಸರ್ಕಾರದ ಪತ್ರದಲ್ಲಿ ಸೂಚಿಸಿರುವಂತೆ ಸಂಬಂಧಪಟ್ಟ ವಿಮಾ ಸಂಸ್ಥೆಗಳ ಸಹಮತಿಯನ್ನು ಪಡೆದು ಬೆಳೆ ಸಮೀಕ್ಷೆ ಕಂಡು ಬಂದ ಬೆಳೆಗೆ ಅದರ ವಿಸ್ತೀರ್ಣ ಮತ್ತು ವಿಮಾ ಕಂತಿನ ಮೊತ್ತಕ್ಕೆ ಮಿತಿಗೊಳಿಸಿ ಬೆಳೆ ವಿಮಾ ಪ್ರಸ್ತಾವನೆಯಲ್ಲಿ ಬದಲಾವಣೆ ಮಾಡಲು ಪರಿಗಣಿಸಬಹುದು.

11. ಈ ಎಲ್ಲಾ ಪ್ರಕರಣಗಳ ನಂತರ ವಿಮಾ ಪ್ರಸ್ತಾವನೆಯು ಅಸಿಂಧು ಎಂದು ಕಂಡುಬಂದಲ್ಲಿ ಅಂತಹ ರೈತರಿಗೆ ರೈತರ ವಿಮಾ ಕಂತಿನ ಮೊತ್ತವನ್ನು ಹಿಂದಿರುಗಿಸುವುದು. ಅದಕ್ಕೆ ಸಂಬಂಧಿಸಿದಂತಹ ರಾಜ್ಯ ಸರ್ಕಾರದ ಸಹಾಯಧನ ಹಾಗೂ ಕೇಂದ್ರ ಸರ್ಕಾರದ ವಿಮಾ ಕಂತಿನ ಸಹಾಯಧನವನ್ನು ಆಯಾ ಸರ್ಕಾರಕ್ಕೆ ಸಂಬಂಧಪಟ್ಟ ವಿಮಾ ಸಂಸ್ಥೆಗಳು ಹಿಂದಿರುಗಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

B S Nagarathnamma

(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)

8/11

ರವರಿಗೆ,

1. ಮಹಾಲೇಖಪಾಲರು (ಎ&ಇ)/(ಜಿ&ಎಸ್.ಎಸ್.ಎ)/(ಇ&ಆರ್.ಎಸ್.ಎ),ಕರ್ನಾಟಕ, ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇ–ಆಡಳಿತ, ಬಹು ಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
5. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು.
7. ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
8. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.
9. ನಿರ್ದೇಶಕರು (ಪಿಎಫ್‌ಡಿ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

--

10. ನಿರ್ದೇಶಕರು, ಕೆ.ಎಸ್.ಎನ್.ಡಿ.ಎಂ.ಸಿ, ಯಲಹಂಕ, ಬೆಂಗಳೂರು – ಆಯುಕ್ತರು, ತೋಟಗಾರಿಕೆ ಇಲಾಖೆ ಮುಖಾಂತರ.
11. ಕನ್ವೇನರ್, ಎಸ್.ಎಲ್.ಬಿ.ಸಿ. ಬೆಂಗಳೂರು.
12. ರಾಜ್ಯ ಮಟ್ಟದ ಬೆಳೆ ವಿಮಾ ಸಮನ್ವಯ ಸಮಿತಿಯ ಎಲ್ಲಾ ಸದಸ್ಯರಿಗೆ. (ಆಯುಕ್ತರು, ಕೃಷಿ ಇಲಾಖೆ ಇವರ ಮುಖಾಂತರ)
13. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಬೆಂಗಳೂರು
14. ಎಲ್ಲಾ ಜಿಲ್ಲಾಧಿಕಾರಿಗಳು – ಆಯುಕ್ತರು, ಕೃಷಿ ಇಲಾಖೆ ಮುಖಾಂತರ
15. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್-- ಆಯುಕ್ತರು, ಕೃಷಿ ಇಲಾಖೆ ಮುಖಾಂತರ
16. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು-- ಆಯುಕ್ತರು, ಕೃಷಿ ಇಲಾಖೆ ಮುಖಾಂತರ
17. ಎಲ್ಲಾ ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ)–ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ
18. ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು – ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮುಖಾಂತರ
19. ಎಲ್ಲಾ ಲೀಡ್ ಬ್ಯಾಂಕುಗಳು – ಎಸ್.ಎಲ್.ಬಿ.ಸಿ. ಮುಖಾಂತರ.
20. ಎಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು– ಅಪೆಕ್ಸ್ ಬ್ಯಾಂಕ್‌ನ ಮುಖಾಂತರ.
21. ಎಲ್ಲಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು – ಎಸ್.ಎಲ್.ಬಿ.ಸಿ. ಮುಖಾಂತರ
22. ಎಲ್ಲಾ ನೋಡಲ್ ಬ್ಯಾಂಕುಗಳು – ಎಸ್.ಎಲ್.ಬಿ.ಸಿ. ಮುಖಾಂತರ
23. ಪ್ರಾದೇಶಿಕ ವ್ಯವಸ್ಥಾಪಕರು, ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿಮಿಟೆಡ್, ಕರ್ನಾಟಕ ಪ್ರಾದೇಶಿಕ ಕಛೇರಿ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ನಂ.18, 3ನೇ ಮಹಡಿ, ನೃಪತುಂಗ ರಸ್ತೆ, ಹಡ್ಸನ್ ವೃತ್ತ, ಬೆಂಗಳೂರು.
24. ಎಲ್ಲಾ ಅನುಮೋದಿತ ಬೆಳೆ ವಿಮಾ ಕಂಪನಿಗಳು. (ಆಯುಕ್ತರು, ಕೃಷಿ ಇಲಾಖೆ ಇವರ ಮುಖಾಂತರ)
25. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ –4), ಬೆಂಗಳೂರು.
26. ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.
27. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
28. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿ

*****

ಅನುಬಂಧ -1

ಸರ್ಕಾರದ ಆದೇಶ ಸಂಖ್ಯೆ:ಕೃಇ 77 ಕೃಕೈಲ 2019 ದಿನಾಂಕ:08.11.2019.

**ಬೆಳೆ ವಿಮೆ ಪ್ರಸ್ತಾವನೆಯಲ್ಲಿನ ನೊಂದಾಯಿತ ಬೆಳೆಯು ಬೆಳೆ ಸಮೀಕ್ಷೆಯ ಮಾಹಿತಿಯೊಂದಿಗೆ ಹೋಲಿಸಿದಾಗ ವ್ಯತ್ಯಾಸವಿದ್ದಲ್ಲಿ ಪರಿಗಣಿಸ ಬೇಕಾದ ವಿನಾಯಿತಿಗಳು**

1. ಬೆಳೆ ಸಮೀಕ್ಷೆಯಂತೆ ತಾಕುಗಳಲ್ಲಿ ಮಾಹಿತಿಯು "ಕಟಾವಾದ ಪ್ರದೇಶವೆಂದು" ನಮೂದಾಗಿದ್ದಲ್ಲಿ ಅನುಮಾನದ ಲಾಭವನ್ನು ರೈತರಿಗೆ ನೀಡುವ ಮೂಲಕ ಅಂತಹ ಪ್ರಸ್ತಾವನೆಗಳಿಗೆ ವಿನಾಯಿತಿ ನೀಡುವುದು ಹಾಗೂ ಸಿಂಧುವೆಂದು ಪರಿಗಣಿಸುವುದು.
2. ಅದೇ ರೀತಿ ಬೆಳೆ ಸಮೀಕ್ಷೆಯಂತೆ ತಾಕುಗಳಲ್ಲಿ ಮಾಹಿತಿಯು "ಪಾಳು ಭೂಮಿ" ಎಂದು ನಮೂದಾಗಿದ್ದಲ್ಲಿ ಅಂತಹ ಮಾಹಿತಿಯು ಕಟಾವಾದ ಪ್ರದೇಶವೂ ಆಗಿರಬಹುದಾಗಿರುವುದರಿಂದ ಅನುಮಾನದ ಲಾಭವನ್ನು ರೈತರಿಗೆ ನೀಡುವ ಮೂಲಕ ಅಂತಹ ಪ್ರಸ್ತಾವನೆಗಳಿಗೆ ವಿನಾಯಿತಿ ನೀಡುವುದು ಹಾಗೂ ಸಿಂಧುವೆಂದು ಪರಿಗಣಿಸುವುದು.
3. ಒಂದು ವೇಳೆ ಬೆಳೆ ಸಮೀಕ್ಷೆಯ ಸಮಯದಲ್ಲಿ ವಿಮೆ ಮಾಡಿಸಿದ ಬೆಳೆಯ ಬದಲಾಗಿ ಬೇರೊಂದು ಬೆಳೆ ಕಂಡು ಬಂದಲ್ಲಿ ಹಾಗೂ ಅಂತಹ ಬೆಳೆಯು,

   3.1 ಅಂತಹ ಪ್ರದೇಶದಲ್ಲಿ, ಬೆಳೆ ಸಮೀಕ್ಷೆ ಮಾಡುವ ಸಮಯದಲ್ಲಿ ಕಟಾವಾಗಿರಬಹುದಾಗಿದ್ದರೆ, ಅನುಮಾನದ ಲಾಭವನ್ನು ರೈತರಿಗೆ ನೀಡುವ ಮೂಲಕ ಅಂತಹ ಪ್ರಸ್ತಾವನೆಗಳಿಗೆ ವಿನಾಯಿತಿ ನೀಡುವುದು ಹಾಗೂ ಸಿಂಧುವೆಂದು ಪರಿಗಣಿಸುವುದು (ಈ ಉದ್ದೇಶಕ್ಕಾಗಿ ಬೆಳೆಗಳ ಪಟ್ಟಿಯನ್ನು (Crop Master) ತಾಲ್ಲೂಕು ವ್ಯಾಪ್ತಿಯಲ್ಲಿ ಒಂದು ಘಟಕ ವೆಂದು ಪರಿಗಣಿಸಿ ಸಿದ್ಧಪಡಿಸತಕ್ಕದ್ದು).

   3.2 ಅಂತಹ ಪ್ರದೇಶದಲ್ಲಿ, ಬೆಳೆ ಸಮೀಕ್ಷೆ ಮಾಡುವ ಸಮಯದಲ್ಲಿ ಪ್ರಕೃತಿ ವಿಕೋಪಗಳಿಂದ ಬೆಳೆ ವಿಫಲಗೊಂಡಿದ್ದಲ್ಲಿ, ಅನುಮಾನದ ಲಾಭವನ್ನು ರೈತರಿಗೆ ನೀಡುವ ಮೂಲಕ ಅಂತಹ ಪ್ರಸ್ತಾವನೆಗಳಿಗೆ ವಿನಾಯಿತಿ ನೀಡುವುದು ಹಾಗೂ ಸಿಂಧುವೆಂದು ಪರಿಗಣಿಸುವುದು. (ಈ ಉದ್ದೇಶಕ್ಕಾಗಿ ಬರ ಘೋಷಣೆ ಸಂಬಂಧಿತ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯನ್ನಾಧರಿಸಿ ತಾಲ್ಲೂಕುಗಳನ್ನು ನಿರ್ಧರಿಸುವುದು. ಹಾನಿಯಾದ ಬೆಳೆಗಳ ವಿವರಗಳನ್ನು ಗ್ರಾಮ ಮಟ್ಟಕ್ಕೆ ಪರಿಗಣಿಸುವುದು).

   3.3 ಬೆಳೆ ಸಮೀಕ್ಷೆಯ ಸಮಯದಲ್ಲಿ ದಾಖಲಾದ ಬೆಳೆಗಳ ಕಟಾವಿನ ನಂತರ ವಿಮೆ ಮಾಡಿದ ಬೆಳೆಯನ್ನು ಬಿತ್ತನೆ ಮಾಡುವ ಸಾಧ್ಯತೆಗಳಿದ್ದಲ್ಲಿ, ಅನುಮಾನದ ಲಾಭವನ್ನು ರೈತರಿಗೆ ನೀಡುವ ಮೂಲಕ ಅಂತಹ ಪ್ರಸ್ತಾವನೆಗಳಿಗೆ ವಿನಾಯಿತಿ ನೀಡುವುದು ಹಾಗೂ ಸಿಂಧುವೆಂದು ಪರಿಗಣಿಸುವುದು.

4. ಸಂಬಂಧಪಟ್ಟ ಇಲಾಖೆಗಳು (ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ) ಮಾನದಂಡಗಳ ಪ್ರಕಾರ ಒದಗಿಸಿದ ಯಾವುದೇ ಸಮರ್ಥನೀಯ ವಿನಾಯಿತಿಗಳನ್ನು ಪರಿಗಣಿಸುವುದು.

   4.1 ಬೆಳೆ ವಿಮೆ ಮಾಡಿದ ಬೆಳೆಯನ್ನು ಬೆಳೆ ಸಮೀಕ್ಷೆಯಲ್ಲಿ ದಾಖಲಾದ ಬೆಳೆಯೊಂದಿಗೆ ಮಿಶ್ರಬೆಳೆಯಾಗಿ ಬೆಳೆಯುವ ಸಾಧ್ಯತೆಗಳಿದ್ದಲ್ಲಿ, ಅನುಮಾನದ ಲಾಭವನ್ನು ರೈತರಿಗೆ ನೀಡುವ ಮೂಲಕ ಅಂತಹ ಪ್ರಸ್ತಾವನೆಗಳಿಗೆ ವಿನಾಯಿತಿ ನೀಡುವುದು ಹಾಗೂ ಸಿಂಧುವೆಂದು ಪರಿಗಣಿಸುವುದು.

4.2 ಬೆಳೆ ವಿಮೆ ಮಾಡಿದ ಬೆಳೆಯನ್ನು ಬೆಳೆ ಸಮೀಕ್ಷೆಯಲ್ಲಿ ದಾಖಲಾದ ಬೆಳೆಯೊಂದಿಗೆ ಅಂತರ ಬೆಳೆಯಾಗಿ ಬೆಳೆಯುವ ಸಾಧ್ಯತೆಗಳಿದ್ದಲ್ಲಿ, ಅನುಮಾನದ ಲಾಭವನ್ನು ರೈತರಿಗೆ ನೀಡುವ ಮೂಲಕ ಅಂತಹ ಪ್ರಸ್ತಾವನೆಗಳಿಗೆ ವಿನಾಯಿತಿ ನೀಡುವುದು ಹಾಗೂ ಸಿಂಧುವೆಂದು ಪರಿಗಣಿಸುವುದು.

4.3 ಬೆಳೆಗಳನ್ನು ಹೋಲಿಸುವಾಗ ನೀರಾವರಿ ಪ್ರಕಾರವನ್ನು (ನೀರಾವರಿ ಅಥವಾ ಮಳೆ ಆಶ್ರಿತ) ಪರಿಗಣಿಸಬಾರದು.

4.4 ಬೆಳೆ ಸಮೀಕ್ಷೆ ಮಾಡದಂತಹ ಹಾಗೂ ಅನುಮೋದಿತ ಬೆಳೆ ಮಾಹಿತಿ ಲಭ್ಯವಿಲ್ಲದಿದ್ದಲ್ಲಿ (ಬೆಳೆ ಸಮೀಕ್ಷೆ ಮಾಡದ. ಬೆಳೆ ಸಮೀಕ್ಷೆ ಮಾಡಿ ಮೇಲ್ವಿಚಾರಕರು ಅನುಮೋದಿಸದ, ಮರು ಸಮೀಕ್ಷೆಗೆ ಗುರುತಿಸಿ ಮರು ಸಮೀಕ್ಷೆ ಮಾಡಲಾರದ, ಮರು ಸಮೀಕ್ಷೆ ಮಾಡಿ ಮೇಲ್ವಿಚಾರಕರು ಅನುಮೋದಿಸದ, ಮೇಲ್ವಿಚಾರಕರು ರದ್ದುಗೊಳಿಸಿದ ಹಾಗೂ ಹಿಂಗಾರು ಬೆಳೆ ಬೆಳೆದ ತಾಕುಗಳನ್ನು ಬೆಳೆ ಮಾಹಿತಿ ಲಭ್ಯವಿಲ್ಲವೆಂದು ಪರಿಗಣಿಸುವುದು) ವಿಮೆ ಮಾಡಿದ ಬೆಳೆಯನ್ನು ಪ್ರಸ್ತಾವನೆಯಲ್ಲಿ ಹೋಲಿಸಲು ಸಾಧ್ಯವಾಗುವುದಿಲ್ಲವಾದ್ದರಿಂದ, ಅಂತಹ ಪ್ರಸ್ತಾವನೆಗಳಿಗೆ ವಿನಾಯಿತಿ ನೀಡುವುದು ಹಾಗೂ ಸಿಂಧುವೆಂದು ಪರಿಗಣಿಸುವುದು.

4.5 ಬೆಳೆ ಸಮೀಕ್ಷೆ ಸಮಯದಲ್ಲಿ ಸೆರೆಹಿಡಿಯಲಾದ ಛಾಯಾಚಿತ್ರದಲ್ಲಿ ಬೆಳೆ ವಿಮೆ ಮಾಡಿಸಿದ ಬೆಳೆಯು ಕಂಡುಬಂದಲ್ಲಿ ಅಂತಹ ಪ್ರಸ್ತಾವನೆಗಳನ್ನು ಸಿಂಧುವೆಂದು ಪರಿಗಣಿಸುವುದು.

4.6 ವಿಮೆ ಮಾಡಿಸಿದ ಬೆಳೆಯು ಬಹುವಾರ್ಷಿಕ ಬೆಳೆಯಾಗಿದ್ದು, ಛಾಯಾಚಿತ್ರದಲ್ಲಿ ಬೆಳೆ ವಿಮೆ ಮಾಡಿಸಿದ ಬೆಳೆಯು ಕಂಡುಬಾರದೇ ಇದ್ದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಮುಂದಿನ ಪರಿಶೀಲನೆಗೆ ಗುರುತಿಸಿ ಸ್ಥಳ ತನಿಖೆ ಮಾಡಿ, GPS ಛಾಯಾ ಚಿತ್ರದೊಂದಿಗೆ ಮಾಹಿತಿ ಸಂಗ್ರಹಿಸಿ, ಒಂದುವೇಳೆ ವಿಮೆ ಮಾಡಿಸಿದ ಬೆಳೆಯು ಕ್ಷೇತ್ರದಲ್ಲಿ ಕಂಡುಬಂದಲ್ಲಿ ಅಂತಹ ಪ್ರಸ್ತಾವನೆಗಳಿಗೆ ವಿನಾಯಿತಿ ನೀಡುವುದು ಹಾಗೂ ಸಿಂಧುವೆಂದು ಪರಿಗಣಿಸುವುದು.

5. ವಿಮೆ ಮಾಡಿದ ಬೆಳೆಯು **Prevented Sowing** ಅಡಿ ಅಧಿಸೂಚಿತವಾಗಿದ್ದಲ್ಲಿ ಅಂತಹ ಪ್ರಸ್ತಾವನೆಗಳಿಗೆ ಬೆಳೆ ಸಮೀಕ್ಷೆ ಮಾಹಿತಿಯೊಂದಿಗೆ ಹೋಲಿಸುವ ಅಗತ್ಯವಿರುವುದಿಲ್ಲ.
6. ದೂರು ಪರಿಶೀಲನಾ ಸಮಿತಿ ಮತ್ತು ಮೇಲ್ಮನವಿ ಸಮಿತಿಗಳು ಸಿಂಧುವೆಂದು ತಿಳಿಸಿದ ಪ್ರಸ್ತಾವನೆಗಳನ್ನು ಸಿಂಧುವೆಂದು ಪರಿಗಣಿಸುವುದು.

B S Nagarathnam

(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)

8/11